ಮೀಮಾಂಸಿ. ಈ ಬದುಕನ್ನು ಅದರ ನಿತ್ಯ ಕರ್ಮಗಳನ್ನು ಸುಖ ದುಃಖಗಳನ್ನು ಸತ್ಯವೆಂದು ಒಪ್ಪಿಕೊಂಡು ಪ್ರೀತಿಸುವವಳು.

ಸ್ವಲ್ಪ ದಿನಗಳಿಂದ ಸರಸವಾಣಿಯ ನಡವಳಿಕೆಗಳಲ್ಲಿ ಬಹಳವೇ ಬದಲಾವಣೆಗಳು ಕಂಡವು. ಸದಾ ಅರಳಿರುವ ಅವಳ ಮುಖ ಇತ್ತೀಚೆಗೆ ಬಾಡಿ, ಒಂದು ನಿರಂತರ ಶೋಕವನ್ನು ಎದುರುಗೊಳ್ಳಲು ತನ್ನನ್ನು ಸಿದ್ಧಪಡಿಸಿಕೊಳ್ಳುವಂತೆ ಕಳೆಗುಂದಿತ್ತು. ಬೆಳಗ್ಗೆ ಎದ್ದು ಗಂಡ ಮಂಡನ ಮಿಶ್ರನ ನಿತ್ಯದ ಹೋಮ ಅನುಷ್ಠಾನಗಳಿಗೆ ಬೇಕಾದ್ದನ್ನು ಸಿದ್ಧಗೊಳಿಸುವುದರಿಂದ ಸಂಜೆಯ ಹೊತ್ತು ಅವರೊಂದಿಗೆ ಕುಳಿತು ಅವರ ವಿದ್ಯಾರ್ಥಿಗಳಿಗೆ ಜೈಮಿನಿಯ ಮೀಮಾಂಸ ಸೂತ್ರಗಳನ್ನು ವಿವರಿಸಿ ಹೇಳುವವರೆಗಿನ ಎಲ್ಲ ಕೆಲಸಕಾರ್ಯಗಳನ್ನೂ ಒಂದು ಯಂತ್ರಗತಿಯಲ್ಲಿ ಅವಳು ಮಾಡುವಂತೆ ತೋರುತ್ತಿತ್ತು. ಅವಳು ಆಸೆಯಿಂದ ಮಾತನಾಡಿ ಮುದ್ದಾಡುವ ಗಿಳಿಗಳೊಂದಿಗೂ ಅವಳು ಕಳೆಯುವ ಸಮಯ ಬಹಳ ಕಡಿಮೆಯಾಗಿ ಅವಳು ಏಕಾಂತವನ್ನು ಬಯಸುವ ಸಮಯವೇ ಹೆಚ್ಚಾಯಿತು.

ಅಂದು ಸಂಜೆ ಆಹಾರ ಇಡಲು ಸರಸವಾಣಿ ಪಂಜರಗಳ ಬಳಿ ಬಂದಾಗ ಎಲ್ಲ ಗಿಳಿಗಳು ಏಕ ಕಾಲದಲ್ಲಿ, 'ಸರಸವಾಣಿ... ಸರಸವಾಣಿ...' ಎಂದು ಅವಳ ಹೆಸರನ್ನು ಅದೇ ಮೊದಲ ಸಲ ಉಚ್ಚರಿಸುವಂತೆ ಕೀಚಲು ದನಿಗಳಲ್ಲಿ ಕೂಗಿದವು. ಸರಸವಾಣಿ ಯಾವ ಸ್ವಾರಸ್ಯವನ್ನು ತೋರದೆ, 'ಹೌದು, ನನ್ನ ಪ್ರೀತಿಯ ಗಿಳಿಗಳೇ... ನಾನು ಸರಸವಾಣಿಯೇ, ಅದಕ್ಕೇನಂತೆ?' ಎಂದು ಹೇಳುತ್ತಲೇ ಹಣ್ಣುಗಳನ್ನು ಧಾನ್ಯಗಳನ್ನು ಪ್ರತಿಯೊಂದು ಪಂಜರದೊಳಗೆ ಇಡುತ್ತಾ ಹೋದಳು.

ಗಿಳಿಗಳು ಅವಳು ಹೇಳುವುದನ್ನು ಕೇಳಿಸಿಕೊಳ್ಳದೆ ತಮ್ಮೊಳಗೆ ಮಾತನಾಡಿಕೊಂಡವು.

"ಸ್ವಲ್ಪ ದಿನದಿಂದ ಈ ನಮ್ಮ ಗೆಳತಿ ಸಂತೋಷವಾಗಿಲ್ಲ, ಗಮನಿಸಿದೆಯಾ?" ಎಂದು ಒಂದು ಗಿಳಿ ಮತ್ತೊಂದು ಗಿಳಿಯ ಬಳಿ ಸರಸವಾಣಿಯ ಕಿವಿಗೆ ಬೀಳುವಂತೆ ಕೇಳಿತು.

ಸರಸವಾಣಿಗೆ ಗಿಳಿಗಳ ಅಂತರಂಗದ ಭಾಷೆ ಗೊತ್ತು. ಅವಳ ಅಂತರಂಗದ ಭಾಷೆ ಅವುಗಳಿಗೂ ಗೊತ್ತು.

ಮತ್ತೊಂದು ಗಿಳಿ ಹೇಳಿತು: "ಇವಳು ಹೀಗೆ ಸಂತೋಷವನ್ನು ಕಳೆದುಕೊಂಡದ್ದನ್ನು ನಾವು ನೋಡೇ ಇಲ್ಲ. ಏನು ಕಾರಣ ಇರಬಹುದು?"

ಈಗ ಮತ್ತೊಂದು ಪಂಜರದಿಂದ ಮೂರನೆಯ ಗಿಳಿ ಸಂಭಾಷಣೆಯನ್ನು ಮುಂದುವರೆಸಿತು.

"ಎಲಾ, ಹೋದ ತಿಂಗಳು, ಕಳ್ಳನಂತೆ ಗೋಡೆ ಹಾರಿ, ಅಂಗಳದಲ್ಲಿ ಶ್ರಾದ್ಧ ನಡೆಯುತ್ತಿದೆ ಎಂಬುದನ್ನೂ ಲಕ್ಷಿಸದೆ ಒಳ ನುಗ್ಗಿ ಮಂಡನ ಮಿಶ್ರನ ಬಳಿ ವಾದ ಭಿಕ್ಷೆ ಬೇಡಿ ಹಟ ಮಾಡಿದ ಆ ಯುವ ಸನ್ಯಾಸಿ, ನೆನಪಿದೆಯೇ? ಎಲ್ಲ ಸಮಸ್ಯೆಯೂ ಅವರಿಂದಲೇ... ನಮ್ಮ ಯಜಮಾನಿ ಶೋಕದಿಂದಿರಲು ಆ ಮನುಷ್ಯನೇ ಕಾರಣ..."

ಅಲ್ಲಿಯ ವರೆಗೆ ಗಿಳಿಗಳ ಸಂಭಾಷಣೆ ಕಿವಿಗೆ ಬೀಳದಂತೆ ತನ್ನ ಕೆಲಸದಲ್ಲಿ ನಿರತಳಾಗಿದ್ದ ಸರಸವಾಣಿ ಈಗ ಮಧ್ಯಪ್ರವೇಶಿಸಿ, "ಏಯ್, ಅಧಿಕ ಪ್ರಸಂಗಿಗಳೇ, ಸುಮ್ಮನಿರಿ..." ಎಂದು ಹುಸಿಗೋಪದಿಂದ ಅವುಗಳನ್ನು ಗದರಿಸಿದಳು.

ಯಜಮಾನಿಯ ಹುಸಿ ಗದರಿಕೆಗೆ ಭಯಪಡುವಂತೆ ಚಟ್ಟೆಂದು ಮೌನವಾದ ಗಿಳಿಗಳು, ಒಂದು ನಿಮಿಷ ತಡೆದು ಮತ್ತೆ ಏಕ ಕಾಲದಲ್ಲಿ, "ಸರಸವಾಣಿ... ಸರಸವಾಣಿ," ಎಂದು ಅವಳ ಹೆಸರನ್ನು ಉಚ್ಚರಿಸಿ ಕೂಗಾಡಿದವು.

ಸರಸವಾಣಿಗೆ ನಗು ಬಂದಿತು.